ಪ್ರಕಟವಾಗಿದ್ದು, ಅವುಗಳಲ್ಲಿ ಎರಡು ಬಹುಮುಖ್ಯವಾದವುಗಳು. 1918ರಲ್ಲಿ ಪ್ರಕಟವಾದ 'ಈಗ ನಾವು ಮಾತನಾಡುವ ಭಾಷೆಗೆ ವ್ಯಾಕರಣವನ್ನು ಹೇಗೆ ರಚಿಸಬೇಕು' ಲೇಖನ ಹಲವಾರು ಪ್ರೌಢ ವಿಚಾರಗಳಿಂದ ಹಾಗೂ ಹೌದೆನ್ನಿಸುವ ಶೈಲಿಯಿಂದ ಗಮನಾರ್ಹವಾಗಿದೆ. ಅದರಲ್ಲಿಯ ಕೆಲವು ವಾಕ್ಯಗಳು ಇಲ್ಲಿವೆ: 'ಪ್ರಾಚೀನ ಕಾಲದ ಭಾಷಾ ವೈಭವವೆಂದರೆ ಪದ್ಯವೇ ಸರಿ', 'ಸಮಸ್ತ ಸಂಸ್ಕೃತ ವಾಙ್ಮಯ ಪದ್ಯಮಯವಾಗಿದೆ', 'ತತ್ಕಾಲೀನ ವೈಯ್ಯಾಕರಣರು ಈ ಪದ್ಯ ವಾಙ್ಮಯವನ್ನೇ ಲಕ್ಷ್ಯವಾಗಿಟ್ಟುಕೊಂಡು ವ್ಯಾಕರಣ ರಚಿಸಿದ್ದಾರೆ', 'ಶಬ್ದಮಣಿದರ್ಪಣ, ಶಬ್ದಾನುಶಾಸನ ಮುಂತಾದ ಹಳೆಯ ವ್ಯಾಕರಣಗಳು ಅರ್ವಾಚೀನ ಕಾಲದ ಪ್ರೌಢವಾದ ಗದ್ಯರಚನೆಯನ್ನು ನಿರ್ಣಯಿಸುವುದಕ್ಕೆ ಅಸಮರ್ಥವಾಗಿವೆ. ಆದುದರಿಂದ ಕನ್ನಡದ ಏಳಿಗೆಗಾಗಿ ಹೊಸ ವ್ಯಾಕರಣ ರಚಿಸುವುದು ಅಗತ್ಯವಾಗಿದೆ.'

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ 1935ರ ಡಿಸೆಂಬರ್‌ನಲ್ಲಿ ಮುಂಬಯಿಯಲ್ಲಿ ಜರುಗಿತು. ಅದು 21ನೇ ಸಮ್ಮೇಳನವಾಗಿದ್ದು, ಅದರಲ್ಲಿ ಮೊದಲ ಸಲ 'ಸಂಶೋಧಕ ಗೋಷ್ಠಿ'ಯನ್ನು ಆಯೋಜಿಸಲಾಗಿತ್ತು ಮತ್ತು ಅದರ ಅಧ್ಯಕ್ಷರಾಗಿದ್ದವರು ರಾಜಪುರೋಹಿತರು. ಅಧಿವೇಶನದಲ್ಲಿ ಹಾಗೂ ಮತ್ತೊಂದೆರಡು ಲೇಖನಗಳಲ್ಲಿ 'ಇತಿಹಾಸವೆಂದರೆ ಏನು?' ಎಂಬುದನ್ನು ಅವರು ಹೇಳಿದ್ದಾರೆ. 'ಅದ್ಭುತ ರಮ್ಯವಾದ ಯುದ್ಧಗಳ ವರ್ಣನೆಯ ಅಥವಾ ಕೇವಲ ಅರಸು ಮನೆತನದ ಚರಿತ್ರೆಯೆಂದರೆ ಮಾತ್ರ ಇತಿಹಾಸವಲ್ಲ', 'ಸಮಾಜಪುರುಷನ ಸಹಸ್ರವಿಧ ವ್ಯಾಪಾರಗಳ ಅತಿ ಸೂಕ್ಷ್ಮವಾದ ಪರಿಷ್ಕಾರವೇ ನಿಜವಾದ ಇತಿಹಾಸ...', 'ರಾಜಕಾರಣಕ್ಕೆ ಅಗ್ರಸ್ಥಾನವಿದ್ದರೂ ರಾಜಕಾರಣವೂ ಇತಿಹಾಸದ ಒಂದು ಭಾಗ.'

ಆಯಾ ಕಾಲದ ಸಂಸ್ಕೃತಿಯನ್ನು ನಿರ್ಮಿಸಿದ ಕವಿಗಳು, ಕಲಾಕಾರರು ಇವರ ಕಾರ್ಯ ಕೂಡ ಇತಿಹಾಸವೇ. ಹೀಗಾಗಿ ರಾಜಪುರೋಹಿತರ ಸಂಶೋಧನೆಗಳಲ್ಲಿ ಬದಾಮಿ ಚಾಲುಕ್ಯರ ಪುಲಿಕೇಶಿ, ಕಲ್ಯಾಣ ಚಾಲುಕ್ಯರ ವಿಕ್ರಮಾದಿತ್ಯ, ರಾಷ್ಟ್ರಕೂಟರ ನೃಪತುಂಗ, ವಿದ್ಯಾರಣ್ಯರು ಎಷ್ಟು ಮಹತ್ವದ ಸ್ಥಾನ ಪಡೆದಿರುವರೋ ಅಷ್ಟೇ ಮಹತ್ವದ ಸ್ಥಾನವನ್ನು ರನ್ನ, ಗಜಾಂಕುಶ, ಹರಿಹರ, ಕುಮಾರವ್ಯಾಸ, ರತ್ನಾಕರವರ್ಣಿ ಇವರೂ ಪಡೆಯುತ್ತಾರೆ. ಈ ಆಯ್ಕೆಗಳಲ್ಲೆಲ್ಲ ಎದ್ದುಕಾಣುವುದು ರಾಜಪುರೋಹಿತರ ಅಪರಿಮಿತ ಕನ್ನಡಾಭಿಮಾನ.

ಕವಿಗಳಿಗೆ ಸಂಬಂಧಿಸಿದಂತೆ ರಾಜಪುರೋಹಿತರು 'ಕವಿರಾಜಮಾರ್ಗ೦'ದ ಮೂರು ಸಂಶೋಧನಾ ಲೇಖನಗಳು, 'ಸಂಶೋಧನೆ ಹೇಗಿರಬೇಕು?' ಎಂದು ಕೇಳುವ ಕಲಿಯಬೇಕೆನ್ನುವ ಕುತೂಹಲಿಗಳಿಗೆ ಮಾರ್ಗದರ್ಶಕವಾಗಲಿವೆ. 1931ರಲ್ಲಿ ಬರೆದ 'ಎರಡರು ಮೂರರ ನಾಡು ಯಾವುದು?' ಬರಹಕ್ಕಾಗಿ ಅವರು ಆಧಾರವಾಗಿರಿಸಿಕೊಂಡದ್ದು – ಕಳಸದ ಶಾಸನ, ಶಿಕಾರಿಪುರ ಶಾಸನ ಮೊದಲಾಗಿ ಆರು ಶಾಸನಗಳು ಹಾಗೂ ರನ್ನನ 'ಗದಾಯುದ್ಧ' ಹಾಗೂ 'ಕವಿರಾಜಮಾರ್ಗ' ಇತ್ಯಾದಿ ಇತ್ಯಾದಿ. ಅದೇ ರೀತಿ 'ತಿರುಳ್ಗನ್ನಡ ನಾಡು ಯಾವುದು?' ಹಾಗೂ 'ಕವಿರಾಜಮಾರ್ಗದ ಕರ್ತೃ ಯಾರು?' ಲೇಖನಗಳು ರಾಜಪುರೋಹಿತರ ವಿದ್ವತ್ತಿಗೆ ಉದಾಹರಣೆಯಂತಿವೆ.

ರಾಜಪುರೋಹಿತರ ವಿಶೇಷ ಅಭಿಮಾನ ಕಲ್ಯಾಣ ವಿಕ್ರಮಾದಿತ್ಯ ಚಕ್ರವರ್ತಿಗೆ. ಅಂತೆಯೇ ಚಾಲುಕ್ಯರ ಎರಡನೇ ಪುಲಿಕೇಶಿಗೆ ದಕ್ಕಿದರೂ ಬಹಳಷ್ಟು ಜನ ಮೆಚ್ಚಿಕೊಂಡಿರುವುದು ಅವರ ವಿಜಯನಗರ ಪತನಕ್ಕೆ ಕಾರಣವಾದ ಸಂಶೋಧನಾ ಲೇಖನವನ್ನೇ. ಒಂದು 'ಬಖೈರು'ವಿನ ಆಧಾರದೊಂದಿಗೆ ಅತಿ ಪರಿಶ್ರಮಪಟ್ಟು ಅನೇಕ ದಿನಗಳ ಬಹುಮುಖಿ ಸಂಶೋಧನೆ ನಡೆಸಿ, 'ಆ ಯುದ್ಧ ನಡೆದದ್ದು ತಾಳಿಕೋಟೆಯಲ್ಲಲ್ಲ; ಅದು ನಾಲ್ವತವಾಡ ಸಮೀಪದ ರಾಕ್ಷಸ–ತಂಗಡಗಿಗಳ ನಡುವಿನ ಪ್ರದೇಶದಲ್ಲಿ' ಎಂದು ಉತ್ಖನನದ ಸಾಕ್ಷ್ಯಸಹಿತ ಸಿದ್ಧಪಡಿಸಿದ್ದಾರೆ.

ರಾಜಪುರೋಹಿತರು ಕೆಲವು ಧಾರ್ಮಿಕ ಶ್ರೇಷ್ಠ ಪುರುಷರ ಬಗೆಗೂ ಸಂಶೋಧನೆಗೈದು ಅವರ ಚರಿತ್ರೆಗಳನ್ನು ಬರೆದಿದ್ದಾರೆ. ಇಲ್ಲೂ ಕೂಡ ಅದೇ ಪ್ರಜ್ಞೆ, ಪದ್ಧತಿಗಳನ್ನು ಉಪಯೋಗಿಸಿದ್ದಾರೆ. ಹೆಸರಿಸಲೇಬೇಕಾದ ಅವರ ಇನ್ನೊಂದು ಕೃತಿ 'ಕರ್ನಾಟಕದ ವರ್ಣನೆಯೂ ಇತಿಹಾಸವೂ'. ಶಾಲಾ ಮಕ್ಕಳಿಗೆ ಪಠ್ಯಪುಸ್ತಕವಾಗಿ ಬರೆದ ಈ ಪುಸ್ತಕ ಪ್ರೌಢರಿಗೆ ಕೂಡ ರಸಭರಿತ ಭಾಷೆ, ವಿವರಗಳೊಂದಿಗೆ ಮುದನೀಡುತ್ತದೆ. ●